PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 178-189
©*IIMRD*, Mysuru
www.iimrd.com

# ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಾತ್ಯತೀತ ಆಂದೋಲನಗಳು: ಒಂದು ಪಕ್ಷಿನೋಟ

**ಡಾ. ಕೆ. ಗುರುಸ್ವಾಮಿ** [1]

**ಪೀಠಿಕೆ**

ಕರ್ನಾಟಕದಾದ್ಯಂತ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' (ಕ.ದ.ಸಂ.ಸ.)ಯು 1970ರ ದಶಕದಲ್ಲಿ ದಲಿತರ ಮೇಲೆ ಸವರ್ಣೀಯರಿಂದ ನಡೆಯುತ್ತಿದ್ದ ಅಮಾನವೀಯ ದೌರ್ಜನ್ಯಗಳ ವಿರುದ್ಧ ಕ್ರಾಂತಿಯನ್ನೇ ನಡೆಸಿತ್ತು. ಈ ಮೂಲಕ ಶೋಷಿತರ ಬಾಳಿಗೆ ಆಶಾಕಿರಣವಾಗಿ ಪ್ರಜ್ವಲಿಸಿ, ಜಾತಿವಾದಿ ಮೇಲ್ವರ್ಗಗಳಂತೆ ಸಮಾಜದಲ್ಲಿ ಸಮಾನವಾಗಿ ತಮ್ಮ ಹಕ್ಕುಗಳನ್ನು ಗಳಿಸಿಕೊಂಡು ಬದುಕುವ ಧೈರ್ಯವನ್ನು ಗಳಿಸಿಕೊಟ್ಟಿತ್ತು. ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯು ತನ್ನ ಸಂಘಟನೆಯ ಸಂವಿಧಾನದಲ್ಲಿ ಜಾತ್ಯತೀತ ಸಿದ್ಧಾಂತವನ್ನು ಅಳವಡಿಸಿಕೊಂಡು ಬುದ್ಧನ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ತತ್ವದ ಆಶಯದಂತೆ, ಪ್ರಗತಿಪರವಾಗಿ ದಲಿತರಂತೆ ದಲಿತೇತರ ಮೇಲೆ ನಡೆಯುತ್ತಿದ್ದ ಮನಕಲಕುವ ಶೋಷಣೆಗಳ ವಿರುದ್ಧ ತನ್ನ ಹೋರಾಟದ ಧ್ವನಿ ಮೊಳಗಿಸಿತು. ಇದರ ಹಿನ್ನಲೆಯಲ್ಲಿ ಕ.ದ.ಸಂ.ಸ.ದ ಈ ರೀತಿಯ ಜಾತ್ಯತೀತ ಹೋರಾಟಗಳು ದಲಿತೇತರರ ಶೋಷಣೆಯ ವಿರುದ್ಧವಾಗಿ ಕೆಲವು ಪ್ರತಿಭಟನೆಗಳು, ಹೋರಾಟಗಳು ನಡೆದಿವೆ. ಹೀಗಾಗಿ ಈ ಲೇಖನದಲ್ಲಿ 'ದಲಿತ ಹಾಗೂ ದಲಿತೇತರ ಪದಗಳ ಅರ್ಥ', 'ಕೋಲಾರದ ಹುಣಸೀಕೋಟೆಯ ಅನುಸೂಯಮ್ಮಳ ಮೇಲೆ ಅತ್ಯಾಚಾರ ಮತ್ತು ಇವಳ ತಂದೆ ಶೇಷಗಿರಿಯಪ್ಪನ ಕಗ್ಗೊಲೆ ಪ್ರಕರಣ', 'ಮಂಡ್ಯ ಜಿಲ್ಲೆಯ ಎ. ನಾಗತೀಹಳ್ಳಿ ಮೀನಾಕ್ಷಮ್ಮಳ ಮೇಲೆ ದೌರ್ಜನ್ಯ ಪ್ರಕರಣ', 'ವಕೀಲ, ಪತ್ರಿಕೋದ್ಯಮಿ ಕಂಚನಹಳ್ಳಿ ಗಂಗಾಧರಮೂರ್ತಿ ಕೊಲೆ ಪ್ರಕರಣ' ಮತ್ತು 'ಜಿಲ್ಲೆಯ ಇನ್ನಿತರ ಸ್ಥಳಗಳಲ್ಲಿನ ದಲಿತೇತರರ ಮೇಲಿನ ದೌರ್ಜನ್ಯ ಪ್ರಕರಣಗಳು', 'ಮಂಗಳೂರು ಜಿಲ್ಲೆಯ ಕೊರಗರ ಪರವಾದ ಭೂ ಹೋರಾಟ', 'ರಾಯಚೂರು ಜಿಲ್ಲೆಯ ಕುದುರೆಮೋತಿ ಪ್ರಕರಣ', 'ದಕ್ಷಿಣ ಕನ್ನಡ ಜಿಲ್ಲೆಯ ಸೌಮ್ಯ ಕೊಲೆ ಪ್ರಕರಣ'ಗಳನ್ನು ಕುರಿತಾಗಿ ಸವಿವರವಾದ ಸಂಶೋಧನಾತ್ಮಕ ವಿವರಗಳನ್ನು ಪ್ರಸ್ತುತ ಪಡಿಸಲಾಗಿದೆ.

---

[1] *ಸಮಾಜ–ವಿಜ್ಞಾನ ಶಿಕ್ಷಕರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಳೆನರಸೀಪುರ, ಹಾಸನ.*

**ದಲಿತ ಹಾಗೂ ದಲಿತೇತರ ಪದಗಳ ಅರ್ಥ**

ಕರ್ನಾಟಕದಲ್ಲಿ ದಲಿತ ಚಳುವಳಿಯು 'ದಲಿತ' ಎಂಬ ನಾಮಾಂಕಿತದಿಂದ 20ನೇ ಶತಮಾನದ ಎಪ್ಪತ್ತರ ದಶಕದಲ್ಲಿ ಪ್ರಾರಂಭವಾಯಿತು. ಈ ಚಳುವಳಿಯ ಉಗಮಕ್ಕೆ ಸಂಬಂಧಿಸಿದ ಸನ್ನಿವೇಶಗಳನ್ನು ತಿಳಿದುಕೊಳ್ಳುವುದಕ್ಕೆ ಮುಂಚಿತವಾಗಿ 'ದಲಿತ' ಪದದ ಅರ್ಥವನ್ನು ಈ ಸಂದರ್ಭದಲ್ಲಿ ತಿಳಿದುಕೊಳ್ಳುವುದು ಸೂಕ್ತ ಎಂದೆನಿಸುತ್ತದೆ. 'ದಲಿತ' ಎಂಬ ಪದವು ಸಂಸ್ಕೃತ ಭಾಷೆಯ 'ದಲ್' ಎಂಬ ಪದದಿಂದ ಬಂದಿದೆ. 'ದಲ್' ಎಂದರೆ 'ದಳ', 'ಗುಂಪು', 'ಸೈನ್ಯ', 'ಚೂರು', 'ಸೈನ್ಯದ ಹರಿತವಾದ ಶಸ್ತ್ರ' ಎಂಬ ವಿವಿಧ ಅರ್ಥಗಳನ್ನು ನೀಡುತ್ತದೆ.[1] ಅಂದರೆ ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಪಂಚಮರು, ಅಂತ್ಯಜರು, ಬಹಿಷ್ಕೃತರು, ಅಸ್ಪೃಶ್ಯರು ಎಂಬ ಹೆಸರು ಪಡೆದು ಶೋಷಣೆಗೆ ಒಳಗಾಗಿರುವ ಎಲ್ಲಾ ಜನಾಂಗಗಳನ್ನು 'ದಲಿತರು' ಎಂದು ಕರೆಯಬಹುದು. ಇನ್ನೂ ವಿಶಾಲಾರ್ಥದಲ್ಲಿ ವಿದೇಶಿಯ ಸಮಾಜಶಾಸ್ತ್ರಜ್ಞೆಯಾದ ಗೇಯ್ಲ್ ಓಂವೆಡ್ಟ್ ಎಂಬುವವರು 'Members of Scheduled caste and scheduled Tribes, neo Buddhists, the working people, the land less poor peasants, women and all those who are being exploited politically, economically and in the name of religion' ಎಂದು ತಮ್ಮ ವ್ಯಾಖ್ಯಾನದ ಮೂಲಕ 'ದಲಿತ' ಪದದ ಅರ್ಥವನ್ನು ತಿಳಿಸಿಕೊಟ್ಟಿದ್ದಾರೆ.[2]

ದಲಿತೇತರರೆಂದರೆ, 'ಬ್ರಾಹ್ಮಣ ವರ್ಗಗಳನ್ನು ಹೊರತುಪಡಿಸಿ ಅಸ್ಪೃಶ್ಯರನ್ನು ಒಳಗೊಂಡು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಹಿಂದುಳಿದಿರುವ ಎಲ್ಲಾ ಜಾತಿಗಳು' ಎಂಬರ್ಥ ಸಿಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಬ್ರಾಹ್ಮಣೇತರರೆಂದರೆ 'ಹಿಂದುಳಿದವರ್ಗ'ಗಳೆಂದೇ ಪ್ರತಿಬಿಂಬಸಲಾಗಿದೆ. ಬಿ.ಆರ್. ಅಂಬೇಡ್ಕರ್‌ರವರೇ ಹೇಳುವಂತೆ 'ಹಿಂದುಳಿದ ವರ್ಗಗಳೆಂದರೆ ಬೇರೇನೂ ಅಲ್ಲ. ಅವರೊಂದು ಅನೇಕ ಜಾತಿಗಳ ಸಮೂಹ' ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ಈ ಹಿಂದುಳಿದವರ್ಗಗಳಲ್ಲಿ ಪ್ರಮುಖವಾಗಿ ಲಿಂಗಾಯಿತರು, ಒಕ್ಕಲಿಗರು, ಮುಸ್ಲಿಮರು, ಹೊಲೆಯ, ಮಾದಿಗ, ಕುರುಬ, ಕುಂಬಾರ, ಬಂಜಾರ, ಬಣಜಿಗ, ಭೋವಿ ಮುಂತಾದ ಜಾತಿಗಳು ಸೇರಿ ಬ್ರಾಹ್ಮಣೇತರರೆಂದು ಗುರುತಿಸಿಕೊಂಡಿದ್ದಾರೆ. ಇವರೆಲ್ಲರೂ ಪ್ರಾಚೀನ ವರ್ಣವ್ಯವಸ್ಥೆಯಲ್ಲಿ ಶೂದ್ರರು, ಅತಿಶೂದ್ರರು ಆಗಿದ್ದರು.[3]

ಇದರ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ಇಂತಹ ದಲಿತೇತರರ ಅಂತಃಶಕ್ತಿಯನ್ನೇ ನಾಶಮಾಡುವ ಶೋಷಣೆಗಳ ವಿರುದ್ಧ ದಲಿತ ಸಂಘರ್ಷ ಸಮಿತಿಯ ಮೂಲಕ ಅವಿಸ್ಮರಣೀಯವಾದ ಜಾತ್ಯತೀತ ಚಳವಳಿ ಘಟಿಸಿದವು. ಅವುಗಳ ವಿವರಗಳನ್ನು ಈ ಕೆಳಕಂಡಂತೆ ತಿಳಿದುಕೊಳ್ಳಬಹುದು.

**ಅನಸೂಯಮ್ಮಳ ಮೇಲಿನ ಅತ್ಯಾಚಾರ ಹಾಗೂ ಇವಳ ತಂದೆ ಶೇಷಗಿರಿಯಪ್ಪನ ಕಗ್ಗೊಲೆ ಪ್ರಕರಣ**

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು, ಟೇಕಲ್ಲು ಹೋಬಳಿ ಹುಣಸೇಕೋಟೆ ಗ್ರಾಮದಲ್ಲಿ ಶೇಷಗಿರಿಯಪ್ಪ ಎಂಬ ಬಡ ಕುಂಬಾರ ಮಡಿಕೆ–ಕುಡಿಕೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದನು. ಈತನಿಗೆ ಅನುಸೂಯಮ್ಮ ಎಂಬ ವಿಧವೆ ಮಗಳಿದ್ದಳು. ಇದೇ ಊರಿನಲ್ಲಿ 'ಮಾಲೂರು ತಾಲೂಕು ಬೋರ್ಡ್' ಅಧ್ಯಕ್ಷನಾಗಿ ಕೃಷ್ಣೇಗೌಡ ಎಂಬುವವನಿದ್ದನು. ಈತ ದೊಡ್ಡ ಜಮೀನ್ದಾರನಾಗಿದ್ದನು.

ಹುಣಸೀಕೋಟೆಯಲ್ಲಿ ಎಂ. ಕೃಷ್ಣಪ್ಪ ಎಂಬುವವನು ತನ್ನ 27 ಗುಂಟೆ ಜಮೀನನ್ನು ಶೇಷಗಿರಿಯಪ್ಪನ ಬಡತನವನ್ನು ಕಂಡು ಉದಾರವಾಗಿ ನೀಡಿದ್ದನು. ಈ ವಾಸ್ತವತೆಯನ್ನು ಗಮನಿಸದ ಕೃಷ್ಣೇಗೌಡನು ಶೇಷಗಿರಿಯಪ್ಪನು ನಾನು ಕೊಳ್ಳಬೇಕಿದ್ದ ಜಮೀನನ್ನು ಕೊಂಡುಕೊಂಡನೆಂದು ಈತನ ಮೇಲೆ ವಿಷಕಾರ ತೊಡಗಿದನು. ಈ ಹಿನ್ನಲೆಯಲ್ಲಿ ಕೃಷ್ಣೇಗೌಡನು ಶೇಷಗಿರಿಯಪ್ಪ ತನ್ನ ಕುಂಬಾರಿಕೆಯ ಮಡಿಕೆ–ಕುಡಿಕೆಗಳನ್ನು ಸುಡಲು ಮಾಡಿಕೊಂಡಿದ್ದ ಅವುಗೆಯನ್ನು ಕಂಡು ಇದು ಜನ ಸಂಚಾರಕ್ಕೆ ಅಡ್ಡಿಯಾಗಿದೆ ಹಾಗೂ ಊರಿನ ಸೌಂದರ್ಯಕ್ಕೆ ಮಸಿ ಬಳಿದಿದೆ ಎಂದು ಆರೋಪ ಮಾಡಿ ಬಿ.ಡಿ.ಓ.ನ ನೋಟೀಸ್ ಮೂಲಕ ಅವುಗೆಯನ್ನು ಕಿತ್ತು ಹಾಕಿಸಿದನು. ಇದಿಷ್ಟೆ ಅಲ್ಲದೆ ಶೇಷಗಿರಿಯಪ್ಪನಿಗೆ ಒಂದೆರಡು ಎಕರೆ ಪಿತ್ರಾರ್ಜಿತ ಜಮೀನು ಇತ್ತು. ಇದರ ಮೇಲೂ ಕೃಷ್ಣೇಗೌಡನಿಗೆ ಕಣ್ಣು ಬಿದ್ದು ಅದನ್ನು ಶೇಷಗಿರಿಯಪ್ಪನಿಂದ ಕಸಿದುಕೊಳ್ಳಲು ಯೋಜಿಸಿದನು. ಇದಕ್ಕಾಗಿ ಜಿಲ್ಲಾಧಿಕಾರಿಗಳಿಂದ ಈ ಭೂಮಿ ಆಕ್ರಮ ಜಮೀನಾಗಿದೆ ಎಂದು ಎಲ್.ಎ.ಒ.ಹೆಚ್.ಎಲ್.ಪಿ13/78–79 ಎಂಬ ಆದೇಶ ಸಂಖ್ಯೆಯಡಿ ಸುತ್ತೋಲೆಯನ್ನು ಹೊರಡಿಸುವಂತೆ ಮಾಡಿದನು. ಅಲ್ಲದೆ ಈ ಅಕ್ರಮ ಸಾಗುವಳಿಯ ತಪ್ಪಿಗಾಗಿ ಶೇಷಗಿರಿಯಪ್ಪನು 2780/– ರೂಪಾಯಿ ಜುಲ್ಮಾನೆ ಕಟ್ಟುವಂತೆ ನೋಟೀಸ್ ಜಾರಿಯಾಗಿತ್ತು. ಆಗ ಶೇಷಗಿರಿಯಪ್ಪ ತನ್ನ ಈ ಭೂಮಿಗೆ ಸಂಬಂಧಿಸಿದಂತೆ ಸರ್ಕಾರವೇ ನೀಡಿದ ಹಕ್ಕುಪತ್ರಗಳನ್ನು ಮೇಲಾಧಿಕಾರಿಗಳ ಮುಂದೆ ಹಾಜರುಪಡಿಸಿದ ಮೇಲೆ ಕೃಷ್ಣೇಗೌಡನ ತಂತ್ರಗಳು ನಡೆಯದೆ ಹೋದವು.

ಇದರಿಂದಾಗಿ ಕೃಷ್ಣೇಗೌಡನಿಗೆ ಅವಮಾನವಾದಂತಾಯಿತು. ಇದರಿಂದ ಕೋಪಗೊಂಡ ಕೃಷ್ಣೇಗೌಡ ಶೇಷಗಿರಿಯಪ್ಪನ ಚರಾಸ್ತಿಗಳನ್ನು, ಬೆಳೆಗಳನ್ನು ನಾಶಮಾಡಿದನು. ಅಲ್ಲದೆ ಶೇಷಗಿರಿಯಪ್ಪನಿಗೆ ಪ್ರಾಣ ಬೆದರಿಕೆ ಹಾಕಿದನು. ಇದರಿಂದ ಕಂಗಾಲಾದ ಶೇಷಗಿರಿಯಪ್ಪ ತನ್ನ ನೋವಿನ ಸಂಗತಿಯನ್ನು ಸರ್ಕಾರದ ಅಧಿಕಾರಿಗಳಿಗೆ ತಿಳಿಸಿದನು. ಆದರೆ ಅವರಿಂದ ಈತನಿಗೆ ರಕ್ಷಣೆ ಸಿಗದೆ ಹೋಗಲಾಗಿ ದಿಕ್ಕೆಟ್ಟು ಹೋದನು. ಇಂತಹ ವಿಷಮ ಪರಿಸ್ಥಿತಿಯಲ್ಲಿ 6ಆಗಸ್ಟ್, 1979ರಂದು ಈತನ ಮಗಳಾದ 19 ವರ್ಷ ವಯಸ್ಸಿನ ಅನುಸೂಯಮ್ಮ ತಮ್ಮ ಸೀಬೆ ತೋಪನ್ನು ಕಾಯುತ್ತಿದ್ದಾಗ ಕೃಷ್ಣೇಗೌಡನ ತಮ್ಮ ವೆಂಕಟೇಶಪ್ಪ, ನಂಜುಂಡಪ್ಪ ಮತ್ತು ಆತನ 15–20 ಜನ ಸಹಚರರು ಈಕೆಯ ಮೇಲೆ ಅತ್ಯಾಚಾರವೆಸಗಿದರು. ಇದರಿಂದಾಗಿ ಶೇಷಗಿರಿಯಪ್ಪ ಮತ್ತಷ್ಟು

ಮಾನಸಿಕ ಮತ್ತು ದೈಹಿಕವಾಗಿ ಕುಗ್ಗಿಹೋದನು. ಇಂತಹ ಸನ್ನಿವೇಶದಲ್ಲಿ ಈತ ಕೋಲಾರ ಜಿಲ್ಲೆಯ ಕ.ದ.ಸಂ.ಸ.ವು ಮಾಲೂರು ತಾಲೂಕಿನಲ್ಲಿ ಯಾವುದೋ ಒಂದು ಜಾಥಾ ಹೋಗುತ್ತಿದ್ದುದ್ದನ್ನು ಮನಗಂಡು ತನ್ನ ಕಷ್ಟಗಳನ್ನು ಅದರ ಮುಂದೆ ಬಿಚ್ಚಿಟ್ಟನು. ಇದನ್ನು ಮನಗಂಡ ಕ.ದ.ಸಂ.ಸ. ನವೆಂಬರ್ 29, 1979 ರಂದು ಈ 'ಅತ್ಯಾಚಾರ ಪ್ರಕರಣ'ದ ಆರೋಪಿ ಕೃಷ್ಣೇಗೌಡ ಮತ್ತು ಆತನ ಸಹಚರರ ವಿರುದ್ಧ 'ಬೃಹತ್ ಮೆರವಣಿಗೆ'ಯನ್ನು ಹಮ್ಮಿಕೊಂಡಿತು. ಅಲ್ಲದೆ 10 ಡಿಸೆಂಬರ್, 1979ರಲ್ಲಿ ದಲಿತ ಸಂಘರ್ಷ ಸಮಿತಿಯ ಮಹಿಳಾ ವಿಭಾಗವು ಕೃಷ್ಣೇಗೌಡನ ಪ್ರತಿಕೃತಿ ದಹನ ಮಾಡಿ ಅನುಸೂಯಮ್ಮಳ ಮೇಲಿನ ಅತ್ಯಾಚಾರವನ್ನು ಖಂಡಿಸಿತು.[4] ಇದರಿಂದ ಮತ್ತಷ್ಟು ಕುಪಿತಗೊಂಡ ಕೃಷ್ಣೇಗೌಡ ತನ್ನ ದುಷ್ಟ ಕೂಟದ ನೆರವಿನಿಂದ ಮಾರ್ಚ್ 1980ರಲ್ಲಿ ಶೇಷಗಿರಿಯಪ್ಪನ ಮನೆಗೆ ನುಗ್ಗಿ ಆತನನ್ನು ಕೊಲೆಮಾಡಿ, ಆತನ ಕುಟುಂಬದ ಸದಸ್ಯರಿಗೆ ಮಾರಣಾಂತಿಕ ಹಲ್ಲೆ ನಡೆಸಿದನು.

ಇದರಿಂದ ರೊಚ್ಚಿಗೆದ್ದ ದಲಿತ ಸಂಘರ್ಷ ಸಮಿತಿಯ ಮುಂದಾಳುಗಳು ರಾಜ್ಯಾದ್ಯಾಂತ ದಲಿತರನ್ನು ಸಂಘಟಿಸಿಕೊಂಡು ಮಾರ್ಚ್ 9–12, 1980ರಂದು ನಾಲ್ಕು ದಿನಗಳ 'ಬೃಹತ್ ಕಾಲ್ನಡಿಗೆ ಐತಿಹಾಸಿಕ ಜಾಥಾ'ವನ್ನು ಕೋಲಾರದಿಂದ ಬೆಂಗಳೂರಿನ ವಿಧಾನಸೌಧದವರೆಗೆ ಹಮ್ಮಿಕೊಂಡರು. ಈ ಸಂದರ್ಭದಲ್ಲಿ ದಲಿತ ಕಲಾಮಂಡಳಿಯ ಕಲಾವಿದರು ಮತ್ತು ಕವಿಗಳು ಆದ ಕೆ. ರಾಮಯ್ಯರವರು (ಕೋಟಗಾನಹಳ್ಳಿ ರಾಮಯ್ಯ) ಅನುಸೂಯಮ್ಮಳ ಮೇಲಿನ ಈ ಶೋಷಣೆಯ ವಿರುದ್ಧ ಕ್ರಾಂತಿಗೀತೆಯನ್ನು ರಚಿಸಿ ಎಲ್ಲರ ಮನಮಿಡಿಯುವಂತೆ ಹಾಗೂ ಅತ್ಯಾಚಾರಿಗಳ ವಿರುದ್ಧ ಆಕ್ರೋಶ ಬರುವಂತೆ ಹಾಡಿದ್ದರು. ಅದೇ

***ಕೋಟಿ ಕೋಟಿ ಭಾದೆಗಳಲ್ಲಿ***
***ಲಕ್ಷಾಂತರ ನೋವುಗಳಲ್ಲಿ***
***ನೀ ಹುಟ್ಟಿ ಬೆಳೆದೆಯಮ್ಮ***
***ನನ ತಂಗಿ ಅನುಸೂಯ/***
***ಮಾಲೂರು ತಾಲ್ಲೂಕು***
***ಟೇಕಲ್ಲು ಹೋಬಳಿ***
***ಹುಣಸೇಕೋಟೆಯಲ್ಲಿ***
***ಬಡ ಕುಂಬಾರನ ಮನೆಯಲ್ಲಿ***
***ನೀ ಹುಟ್ಟಿ ಬೆಳೆದೆಯಮ್ಮ***
***ನನ ತಂಗಿ ಅನುಸೂಯ /ಕೋಟಿ/***

ಇದೇ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾಗಿದ್ದ ಬಿ. ಕೃಷ್ಣಪ್ಪ ಹಾಗೂ ಎಂ.ಡಿ. ಗಂಗಯ್ಯ, ರಾಜ್ಯಸಮಿತಿಯ ಪ್ರಮುಖರಾದ ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಹೆಚ್. ಗೋವಿಂದಯ್ಯ, ಹರಿಹರ ಆನಂದಸ್ವಾಮಿ, ಕೆ. ರಾಮಯ್ಯ,

ಎಂ. ವೆಂಕಟಸ್ವಾಮಿ, ಸಿ.ಎಂ. ಮುನಿಯಪ್ಪ, ಎನ್. ಗಿರಿಯಪ್ಪ, ಚಂದ್ರಪ್ರಸಾದ್ ತ್ಯಾಗಿ, ರಾಮದೇವ ರಾಕೆ, ಶಿವಾಜಿ ಗಣೇಶನ್, ಪಿ. ಲಂಕೇಶ್, ರಾಜಶೇಖರ ಕೋಟಿ, ಚಂದ್ರಶೇಖರ ಪಾಟೀಲ, ಎಂ.ಎಸ್. ಕೃಷ್ಣನ್ (ಸಿ.ಪಿ.ಐ), ಕೆ. ಭಟ್ (ಸಿ.ಪಿ.ಐ. (ಎಂ), ಕಾಳೇಗೌಡ ನಾಗವಾರ, ವಿಜಯಪಾಟೀಲ (ಕರ್ನಾಟಕ ದಲಿತ ಸಂಘರ್ಷ ಸಮಿತಿ, ಜಿಲ್ಲಾ ಸಂಚಾಲಕರು, ಧಾರವಾಡ) ಭಾಗಿಯಾಗಿದ್ದರು. ಜೊತೆಗೆ ಪ್ರಗತಿಪರರು ಮತ್ತು ದಲಿತಪರ ಕಾಳಜಿ ಹೊಂದಿದ್ದ ದಲಿತೇತರ ವರ್ಗದ ಬರಗೂರು ರಾಮಚಂದ್ರಪ್ಪ, ಲಕ್ಷ್ಮೀಪತಿ ಕೋಲಾರ, ಎನ್.ಎಸ್. ಶಂಕರ್, ಶಂಕರಲಿಂಗೇಗೌಡ ಮುಂತಾದವರು ಪಾಲ್ಗೊಂಡಿದ್ದರು. ಈ ಸಮಯದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಎಲ್ಲರೂ 'ಕೊಲೆಗಡುಕ ಕೃಷ್ಣೇಗೌಡನಿಗೆ ಗಲ್ಲಾಗಲಿ', 'ದಲಿತ ಸಂಘರ್ಷ ಸಮಿತಿಯ ಜಾಥಾಕ್ಕೆ ಜಯವಾಗಲಿ' ಎಂಬ ಕ್ರಾಂತಿಕಾರಿ ಘೋಷಣೆಗಳನ್ನು ಕೂಗಿ ಜಾತ್ಯತೀತ ಭಾವನೆಯಿಂದ ಎಲ್ಲರಲ್ಲೂ ಕೃಷ್ಣೇಗೌಡನ ವಿರುದ್ಧ ಕ್ರಾಂತಿಯ ಕಿಚ್ಚನ್ನು ಹಚ್ಚಿದರು. ಅಲ್ಲದೆ ಈ ಸಂಘಟನೆಯ ಕಾರ್ಯಕರ್ತರು ಹಾಗೂ ಕಲಾವಿದರು ಕ್ರಾಂತಿಗೀತೆಗಳನ್ನು ಹಾಡುವುದರ ಮೂಲಕ ಶೇಷಗಿರಿಯಪ್ಪನ ಕಗ್ಗೊಲೆಯ 'ಬೀದಿನಾಟಕ'ವನ್ನು ಮಾಡಿ ಕಾಲ್ನಡಿಗೆ ಜಾಥಾವನ್ನು ಯಶಸ್ವಿಯಾಗಿ ಮಾಡಿದರು. ಇದರಿಂದ ಆರೋಪಿಗಳಿಗೆ ಶಿಕ್ಷೆಯೂ ಕೂಡ ಆಯಿತು.[6]

**ನಾಗತೀಹಳ್ಳಿ ಮೀನಾಕ್ಷಮ್ಮಳ ಮೇಲಿನ ದೌರ್ಜನ್ಯ ಪ್ರಕರಣ**

ನಾಗಮಂಗಲ ತಾಲ್ಲೂಕಿನಲ್ಲಿರುವ ಎ. ನಾಗತೀಹಳ್ಳಿಯಲ್ಲಿ ಒಕ್ಕಲಿಗ ವರ್ಗಕ್ಕೆ ಸೇರಿದ್ದ ಮೀನಾಕ್ಷಮ್ಮ ಮತ್ತು ಆಕೆಯ ಕುಟುಂಬದ ಮೇಲೆ ಜನವರಿ, 1988ರ ವೇಳೆಯಲ್ಲಿ ಅಮಾನವೀಯವಾದ ದೌರ್ಜನ್ಯವಾಗಿತ್ತು. ಈಕೆಗೆ ಗಂಡನ ಹೆಸರಿನಲ್ಲಿ ಸರ್ಕಾರದಿಂದ ಮೂರುವರೆ ಎಕರೆ ದರಖಾಸ್ತು ಜಮೀನು ಲಭಿಸಿತ್ತು. ಇದನ್ನು ಇವರ ಪಕ್ಕದ ಜಮೀನಿನ ರಾಜೇಗೌಡ ಎಂಬುವವನು ಕಬಳಿಸಲು ಮುಂದಾಗಿದ್ದನು.[7]ಇದಕ್ಕೆ ಪ್ರಮುಖ ಕಾರಣವೆಂದರೆ, ಈಕೆ ಅಕ್ಷರಸ್ಥ ಮಹಿಳೆಯಾಗಿದ್ದು, ಅನ್ಯಾಯವನ್ನು ಪ್ರಶ್ನಿಸಿ ಪ್ರತಿಭಟಿಸುವ ಎದೆಗಾರಿಕೆ ಹೊಂದಿದ್ದಂತಹ ಮಹಿಳೆಯಾಗಿದ್ದಳು. ಅಲ್ಲದೆ ಈಕೆ ಕಷ್ಟದಲ್ಲಿರುವ ದಲಿತ ಕುಟುಂಬಗಳಿಗೆ ಸಹಾಯ ಮಾಡುವ, ಮಹಿಳಾ ಸಂವೇದನೆಯಿಂದ ಸ್ಪಂದಿಸುವ ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ಇದರಿಂದಾಗಿ ಆ ಸಮಯದಲ್ಲಿ ನಾಗಮಂಗಲ ವಿಧಾನ ಸಭಾ ಕ್ಷೇತ್ರದ ಶಾಸಕರಾಗಿದ್ದ ಎಲ್.ಆರ್. ಶಿವರಾಮೇಗೌಡ ಮತ್ತು ಆತನ ಕುಟುಂಬದವರಿಂದ ಮೀನಾಕ್ಷಮ್ಮಳ ಕುಟುಂಬದ ಮೇಲೆ ವೈಷಮ್ಯ ಏರ್ಪಟ್ಟಿತ್ತು. ಆದರೂ ಈಕೆ ತನ್ನ ನೇರನುಡಿ, ಕಷ್ಟದಲ್ಲಿರುವ ಸಮುದಾಯಗಳಿಗೆ ನೆರವಾಗುವ ಪ್ರಗತಿಪರ ಗುಣವನ್ನು ಬಿಟ್ಟಿರಲಿಲ್ಲ.[8]

ಇದನ್ನು ಸಹಿಸದ ಈ ರಾಜಕಾರಣಿಯು ತನ್ನ ಬೆಂಬಲಿಗರು ಮತ್ತು ಸಂಬಂಧಿಕರ ನೆರವಿನಿಂದ ಮೀನಾಕ್ಷಮ್ಮ ಮತ್ತು ಆಕೆಯ ಕುಟುಂಬದ ಮೇಲೆ ವಿವಿಧ ರೀತಿಯ ಶೋಷಣೆಗಳನ್ನು

ಮಾಡಿದ್ದರು. ಒಂದು ದಿನ ಇವರ ಸಹಚರರು ಆಕೆಯ ಮನೆಗೆ ನುಗ್ಗಿ ಸರಕು ಸಾಮಾಗ್ರಿಗಳು, ಹಣದ ಕಳ್ಳತನ ಮಾಡಿ ಮಕ್ಕಳನ್ನು ಅಪಹರಿಸುವ ಪ್ರಯತ್ನ ಮಾಡಿದ್ದರು.[9] ಈ ವಿಷಯ ತಿಳಿದು ಹೆದರಿದ ಮೀನಾಕ್ಷಮ್ಮ ಮತ್ತು ಆಕೆಯ ಕುಟುಂಬ ತಮ್ಮ ಮಕ್ಕಳ ಜೊತೆ ಊರಿನ ಗೋವಿಂದೇಗೌಡರ ಮನೆಯಲ್ಲಿ ರಕ್ಷಣೆ ಪಡೆದಿದ್ದರು. ಈ ಸಂದರ್ಭದಲ್ಲಿ ಇದನ್ನು ಸಹಿಸದ ಎಲ್.ಆರ್. ಶಿವರಾಮೇಗೌಡರ ಕಡೆಯವರು ಈಕೆ ಇದ್ದ ಮನೆಯ ಮೇಲೆ ಕಲ್ಲು ತೂರಾಟ ಕೂಡ ಮಾಡಿದ್ದರು. ಜೊತೆಗೆ ಆಕೆಯನ್ನು ಎ. ನಾಗತೀಹಳ್ಳಿಯಿಂದಲೇ ಹೊರಗಟ್ಟಲು ಪ್ರಯತ್ನಿಸಿದ್ದರು ಎಂಬ ಆರೋಪವೂ ಕೂಡ ಮಾರ್ಧನಿಸುತ್ತಿತ್ತು.[10] ಕ್ರಮೇಣ ಈ ಪ್ರಕರಣದ ಬಗ್ಗೆ ತಿಳಿದ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ನಾರಾಯಣ್, ಗುರುಪ್ರಸಾದ್ ಕೆರಗೋಡು, ಎಸ್.ಎಂ. ಕೃಷ್ಣ, ಎಂ.ಬಿ. ಶ್ರೀನಿವಾಸ್, ಎಂ. ನಾಗರಾಜಯ್ಯ, ಸಿ.ಬಿ. ನಂಜುಂಡಪ್ಪ, ಸೋಮಶೇಖರ ಕೆರಗೋಡು, ಎಂ. ಚಂದ್ರಶೇಖರ್ (ಟಿಪ್ಪು), ಜವರಯ್ಯ (ಕೆ.ಆರ್. ಪೇಟೆ), ಅಯ್ಯಂಗಾರ್ (ಮೇಲುಕೋಟೆ) ಮುಂತಾದವರು ನಾಗತೀಹಳ್ಳಿಗೆ ಬಂದು ಸಭೆ ಸೇರಿ ಪ್ರತಿಭಟಿಸುವುದರ ಮೂಲಕ ಆಕೆಯ ನೆರವಿಗೆ ನಿಂತರು. ಈ ಸಮಯದಲ್ಲಿ ಪ್ರಗತಿಪರ ಹೋರಾಟಗಾರರಾದ ದಲಿತೇತರ ಸಮುದಾಯದ ಎಚ್.ಎಲ್. ಕೇಶವಮೂರ್ತಿ, ಪೋಲಂಕಿ ರಾಮಮೂರ್ತಿ, ಮೀರಾನಾಯಕ್ (ಜಿ.ಎಚ್. ನಾಯಕರ ಪತ್ನಿ), ಪಿ. ಲಂಕೇಶ್, ಕೆ. ರಾಮದಾಸ್, ಸಿದ್ದಲಿಂಗಯ್ಯ, ಬೆಸಗರಹಳ್ಳಿ ರಾಮಣ್ಣ, ಹಿ.ಸಿ. ರಾಮಚಂದ್ರೇಗೌಡ ಮುಂತಾದವರುಗಳ ಬೆಂಬಲ ಕೂಡ ಸಿಕ್ಕಿತ್ತು. ದಲಿತ ಸಂಘರ್ಷ ಸಮಿತಿಯು ಮೀನಾಕ್ಷಮ್ಮಳಿಗೆ ಆಗಿರುವ ಅನ್ಯಾಯಕ್ಕೆ ತಕ್ಕ ಪರಿಹಾರ ಸಿಗಬೇಕೆಂದು ಮತ್ತು ಆಕೆಯ ಕುಟುಂಬಕ್ಕೆ ಊರಿನಲ್ಲಿ ರಕ್ಷಣೆ ಕೊಡಬೇಕೆಂದು ನಾಗತೀಹಳ್ಳಿಯಿಂದ ನಾಗಮಂಗಲದವರೆಗೆ ಬಹಳ ಶಿಸ್ತು, ಸಂಯಮದಿಂದ ಕಾಲ್ನಡಿಗೆ ಜಾಥಾ ಮಾಡಿತ್ತು.[11] ಈ ಸಂದರ್ಭದಲ್ಲಿ ದಲಿತ ಕಲಾಮಂಡಳಿಯ ಕಲಾವಿದರು,

*'ತಾಳಿಕಟ್ಟುವ ಮುನ್ನ*
*ತವರು ತೊರೆಯುವ ಮುನ್ನ*
*ಬದುಕು ಮುಗಿಯಿತೆ ತಂಗಿ*
*ನನ್ನ ಕೂಲಿಯ ತಂಗಿ' ||ತಾಳಿ||*

ಎಂಬ ಹಾಡನ್ನು ಹಾಡುವುದರ ಮೂಲಕ ಪ್ರತಿಭಟಿಸಿದ್ದರು. ದಲಿತ ಸಂಘರ್ಷ ಸಮಿತಿಯ ಈ ಹೋರಾಟದಲ್ಲಿ ಸುಮಾರು 15 ರಿಂದ 20 ಮಂದಿ ಮಹಿಳೆಯರು ಭಾಗವಹಿಸಿದ್ದರು. ಈಕೆಯ ಕುಟುಂಬ ಸದಸ್ಯರು ಪ್ರಾಣ ಬೆದರಿಕೆಯಿಂದ ದಿಕ್ಕು ತೋಚದಂತಾಗಿ ನ್ಯಾಯ ಸಿಗುವವರೆಗೆ 2–3 ತಿಂಗಳ ಕಾಲ ದ.ಸಂ.ಸ.ದ ನಾರಾಯಣ್‌ರವರ ಮನೆಯಲ್ಲಿ ಆಶ್ರಯ ಪಡೆದಿದ್ದರು.[12] ದಲಿತ ಸಂಘರ್ಷ ಸಮಿತಿಯ ಮುಂದಾಳುಗಳು ಇದರಿಂದ ಮತ್ತಷ್ಟು ಕ್ರಿಯಾಶೀಲರಾಗಿ ಶಿವರಾಮೇಗೌಡರ ವಿರುದ್ಧ ಅಂದು ಕಾಂಗ್ರೆಸ್‌ನ ಮುಖ್ಯ ಸಚೇತಕರಾಗಿದ್ದ ಕೆ.ಎನ್. ನಾಗೇಗೌಡರಿಗೆ ತಿಳಿಸಿದ್ದರು. ಅಲ್ಲದೆ

ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿಯವರನ್ನು ಭೇಟಿ ಮಾಡಿ 19 ಜನ ಆರೋಪಿಗಳಿಗೆ ಶಿಕ್ಷೆಯಾಗುವಂತೆ ಮಾಡಿದ್ದರು.[13] ಅಂತಿಮವಾಗಿ ಮೀನಾಕ್ಷಮ್ಮಳ ಸಂಸಾರ ಈ ಎಲ್ಲಾ ರಗಳೆಗಳಿಂದ ಮುಕ್ತಿ ಹೊಂದುವ ಸಲುವಾಗಿ ಊರು ಬಿಟ್ಟು ಬೆಂಗಳೂರಿನಲ್ಲೇ ಉಳಿದು, ಇಂದು ದಲಿತ ಸಂಘರ್ಷ ಸಮಿತಿಯು ತಮ್ಮ ಸಂಸಾರಕ್ಕೆ ಮಾಡಿದ್ದ ಸಹಾಯವನ್ನು ನೆನೆಯುತ್ತಾ ತಾವು ಕೂಡ ಇನ್ನಿತರ ಕಷ್ಟಗಳಿಗೆ ಸ್ಪಂದಿಸುತ್ತಾ ಉತ್ತಮವಾದ ಜೀವನವನ್ನು ನಡೆಸುತ್ತಿದ್ದಾರೆ.

**ವಕೀಲ, ಪತ್ರಿಕೋದ್ಯಮಿ ಕಂಚನಹಳ್ಳಿ ಗಂಗಾಧರಮೂರ್ತಿ ಕೊಲೆ ಪ್ರಕರಣ**

ನಾಗಮಂಗಲ ತಾಲೂಕಿನ ಕಂಚನಹಳ್ಳಿ ಎಂಬಲ್ಲಿ 23 ಸೆಪ್ಟಂಬರ್, 1992ರಂದು ವಿಶ್ವಕರ್ಮ ಜಾತಿಗೆ (ಆಚಾರಿ) ಸೇರಿದ್ದ ವಕೀಲ, ಪತ್ರಿಕೋದ್ಯಮಿ ಗಂಗಾಧರಮೂರ್ತಿಯ ಕೊಲೆಯಾಗಿತ್ತು. ಈ ಪ್ರಕರಣಕ್ಕೆ ಒಂದು ಮುಖ್ಯ ಕಾರಣವೊಂದಿತ್ತು. ಅದೇನೆಂದರೆ, ಅಂದು ಎಂ.ಎಲ್.ಎ. ಆಗಿದ್ದ ಎಲ್.ಆರ್. ಶಿವರಾಮೇಗೌಡರವರ ಮಾವನ ಆಸ್ತಿ ಕಂಚನಹಳ್ಳಿಯಲ್ಲಿತ್ತು. ಈ ಸ್ಥಳದಲ್ಲಿ ಫ್ಯಾಕ್ಟರಿಯನ್ನು ಕಟ್ಟಲು ಇದರ ಸುತ್ತಮುತ್ತಲಿದ್ದ ದಲಿತರ ಜಮೀನನ್ನು ಕಬಳಿಸಲು ಇವರು ಪ್ರಯತ್ನಿಸಿದ್ದರು. ಇವರ ಈ ಕುತಂತ್ರದ ವಿರುದ್ಧ ಗಂಗಾಧರಮೂರ್ತಿಯವರು ಲಂಕೇಶ್ ಪತ್ರಿಕೆಗೆ ಲೇಖನ ಬರೆದಿದ್ದರು. ಇದರಿಂದ ಕುಪಿತರಾದ ಎಲ್.ಆರ್. ಶಿವರಾಮೇಗೌಡರು ಗಂಗಾಧರಮೂರ್ತಿಗೆ ಕೊಲೆ ಬೆದರಿಕೆ ಹಾಕಿದ್ದರು. ಇದನ್ನು ಗಂಗಾಧರಮೂರ್ತಿರವರು ಎಚ್.ಎಲ್. ಕೇಶವಮೂರ್ತಿ ಹಾಗೂ ದಲಿತ ಸಂಘರ್ಷ ಸಮಿತಿಯ ಕೆಲವರಿಗೆ ತಿಳಿಸಿದ್ದರು. ಆದರೆ ಹಾಕಿದ್ದ ಪ್ರಾಣ ಬೆದರಿಕೆಯಂತೆ ಗಂಗಾಧರಮೂರ್ತಿಯವರ ಕೊಲೆ ನಡೆದಿತ್ತು.[14]

ಇದರಿಂದ ರೊಚ್ಚಿಗೆದ್ದ ಜಿಲ್ಲಾ ಮತ್ತು ತಾಲೂಕು ದಲಿತ ಸಂಘರ್ಷ ಸಮಿತಿ ಶಾಖೆಗಳು 01 ಮತ್ತು 04 ಅಕ್ಟೋಬರ್, 1992ರ ವೇಳೆಯಲ್ಲಿ ಕೊಲೆ ಆರೋಪಿ ಎಲ್.ಆರ್. ಶಿವರಾಮೇಗೌಡರ ವಿರುದ್ಧ ಕಂಚನಹಳ್ಳಿಯಿಂದ ನಾಗಮಂಗಲದವರೆಗೆ ಕಾಲ್ನಡಿಗೆ ಮತ್ತು ಸೈಕಲ್ ಜಾಥಾವನ್ನು ಮಾಡಿದ್ದವು. ಇದರಲ್ಲಿ ನಾರಾಯಣ್, ಎಂ. ನಾಗರಾಜಯ್ಯ (ನಾಗಮಂಗಲ ತಾಲೂಕು ಸಂಚಾಲಕರು), ಎಚ್.ಎಲ್. ಕೇಶವಮೂರ್ತಿ, ಗುರುಪ್ರಸಾದ್ ಕೆರಗೋಡು, ಎಂ.ಬಿ. ಶ್ರೀನಿವಾಸ್, ವೆಂಕಟಗಿರಿಯಯ್ಯ ಮುಂತಾದವರು ಭಾಗವಹಿಸಿದ್ದರು. ಇದೇ ಸಮಯದಲ್ಲಿ ಮಂಡ್ಯದಲ್ಲಿ ಆರಂಭವಾಗಿದ್ದ 'ಸಾಕ್ಷರತಾ ಆಂದೋಲನ ಕಾರ್ಯಕ್ರಮ'ದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಲಾತಂಡಗಳು ಇದರಲ್ಲಿ ಭಾಗವಹಿಸಿ ಹೋರಾಟದ ಹಾಡುಗಳು ಮತ್ತು ಬೀದಿನಾಟಕಗಳನ್ನು ಮಾಡಿದ್ದವು. ದಲಿತ ಸಂಘರ್ಷ ಸಮಿತಿಯ ಈ ಕೆಲಸಕ್ಕೆ ರೈತ ಸಂಘವು ಬೆಂಬಲಿಸಿತ್ತು. ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯು ನೆರೆದಿದ್ದ ಸಾವಿರಾರು ಜನಸ್ತೋಮದ ಬೆಂಬಲದಿಂದ ಆರೋಪಿಯನ್ನು ಬಂಧಿಸಿ, ಈ ಕೊಲೆ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸಿತ್ತು.[15]

ಆದರೆ ಈ ಪ್ರಕರಣದ ವಿರುದ್ಧ ಹೋರಾಟಗಳಾಗಿ 12 ದಿನಗಳು ಕಳೆದಿದ್ದರೂ ಆರೋಪಿ ಶಿವರಾಮೇಗೌಡರ ಮೇಲೆ ಪೊಲೀಸರು ಯಾವುದೇ ರೀತಿಯ ಕ್ರಮ ತೆಗೆದುಕೊಂಡಿರಲಿಲ್ಲ. ಇದನ್ನು ಪ್ರಶ್ನಿಸಿ ಪರಿಶೀಲಿಸಿದ ದಲಿತ ಸಂಘರ್ಷ ಸಮಿತಿ ಮತ್ತು ಪ್ರಗತಿಪರ ಸಂಘಟನೆಗಳು ನಿಷ್ಕ್ರಿಯ ಪೊಲೀಸರು ಮತ್ತು ಸರ್ಕಾರದ ವಿರುದ್ಧ 9 ಅಕ್ಟೋಬರ್, 1992ರಂದು ನಾಗಮಂಗಲದಲ್ಲಿ ತಾಲೂಕು ಹಿತರಕ್ಷಣಾ ಸಮಿತಿ, ತಾಲ್ಲೂಕು ದಲಿತ ಸಂಘರ್ಷ ಸಮಿತಿ, ತಾಲ್ಲೂಕು ಮಹಿಳಾ ಮತ್ತು ವಿದ್ಯಾರ್ಥಿ ಒಕ್ಕೂಟಗಳು ತಾಲ್ಲೂಕು ಕಛೇರಿಯ ಮುಂದೆ ಉಪವಾಸ ಸತ್ಯಾಗ್ರಹವನ್ನು ಮಾಡಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದವು.[16]

ಇದೇ ರೀತಿ ಕೆರಗೋಡು ಹೋಬಳಿಯ ಕೀಲಾರದಲ್ಲಿ ಒಕ್ಕಲಿಗ ಮಹಿಳೆಯ ಮೇಲೆ ಅಲ್ಲಿನ ಶಾಲಾ ಶಿಕ್ಷಕರೊಬ್ಬರು ಅತ್ಯಾಚಾರಕ್ಕೆ ಪ್ರಯತ್ನಿಸಿದ್ದರು. ಇವರ ವಿರುದ್ಧವೂ ದಲಿತ ಸಂಘರ್ಷ ಸಮಿತಿಯು ಪ್ರತಿಭಟಿಸಿ ಆಕೆಗೆ ನ್ಯಾಯ ಒದಗಿಸಲು ಪ್ರಯತ್ನಿಸಿತ್ತು.[17.] ಅಲ್ಲದೆ ಇದೇ ಹೋಬಳಿಯ ಆಲಕೆರೆ ಗ್ರಾಮದಲ್ಲಿ ಒಕ್ಕಲಿಗ ಸಮುದಾಯದಿಂದ ಅದೇ ವರ್ಗದ ವ್ಯಕ್ತಿಯೊಬ್ಬರಿಗೆ ಅನ್ಯಾಯವಾಗಿತ್ತು. ಇದರ ವಿರುದ್ಧವೂ ಕೂಡ ದಲಿತ ಸಂಘರ್ಷ ಸಮಿತಿ ಹೋರಾಡಿತ್ತು.[18] ನಾಗಮಂಗಲದ ಕುರುಡಿಕೆರೆ ಗ್ರಾಮದಲ್ಲಿ ಒಕ್ಕಲಿಗ ಸಮುದಾಯದ ತಮ್ಮಣ್ಣೇಗೌಡ ಉರುಫ್ ನಂಜಪ್ಪ ಎಂಬುವವರು ತನ್ನ ಜನಾಂಗದವರಿಗೇ ಭೂ ವಂಚನೆ ಮಾಡಿದ್ದರು. ವಂಚನೆಗೊಳಗಾದ ವ್ಯಕ್ತಿಯಿಂದ ದೂರು ದಲಿತ ಸಂಘರ್ಷ ಸಮಿತಿಗೆ ತಲುಪಿತ್ತು. ಆಗ ಇದು ಇವನ ಪರವಾಗಿ ಹೋರಾಡಿತ್ತು.[19] ಕೆರಗೋಡು ಹೋಬಳಿಯ ದ್ಯಾಪಸಂದ್ರ ಮಾರ್ಗದಲ್ಲಿರುವ ಗಂಟಗೌಡನಹಳ್ಳಿಯಲ್ಲಿ ಲಿಂಗಾಯಿತ ಕೋಮಿನವನಿಗೆ ಅದೇ ವರ್ಗದವರಿಂದ ಭೂ ವಂಚನೆಯಾಗಿತ್ತು. ಇದರ ವಿರುದ್ಧವಾಗಿ ದಲಿತ ಸಂಘರ್ಷ ಸಮಿತಿ ಹೋರಾಡಿತ್ತು. ಇದರಿಂದ ಆತನಿಗೆ ಜಮೀನು ಲಭಿಸಿತ್ತು.[20] ಇದೇ ರೀತಿಯಲ್ಲಿ ಸೋಮನಾಥಪುರ, ಊಳಿಗೇನಹಳ್ಳಿಯಲ್ಲಿ ಶೆಟ್ಟರಿಗೂ ಹಾಗೂ ಕೆ.ಆರ್. ಪೇಟೆಯ ಜಕ್ಕನಹಳ್ಳಿಯಲ್ಲಿ ಒಕ್ಕಲಿಗರ ನಡುವೆ ಕಿತ್ತಾಟಗಳಾಗಿದ್ದವು. ಈ ಸಮಯದಲ್ಲಿ ದಲಿತ ಸಂಘರ್ಷ ಸಮಿತಿ ಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಿತ್ತು.[21.] ನಾಗಮಂಗಲದ ದೇವಲಾಪುರ ಹೋಬಳಿಯ ಜಿ. ಬೊಮ್ಮನಹಳ್ಳಿಯಲ್ಲಿ ತಮ್ಮಣ್ಣೇಗೌಡರಿಗೆ ಅದೇ ವರ್ಗದವರಿಂದ ಭೂ ವಂಚನೆಯಾಗಿತ್ತು. ಇದರ ವಿರುದ್ಧ ದಲಿತ ಸಂಘರ್ಷ ಸಮಿತಿ ನಿಂತಿತ್ತು.[22] ಟಿ.ಎಂ. ಹೊಸೂರಿನಲ್ಲಿ ವಿಶ್ವಕರ್ಮ ಜನಾಂಗದ ಮಹಿಳೆ ನಾಗಮ್ಮನ ಮೇಲೆ ಹಲ್ಲೆಯಾಗಿತ್ತು. ತಿಪ್ಪೆಗೆ ಕಸ ಹಾಕುವ ವಿಚಾರದಲ್ಲಿ ಕೆಲವು ಒಕ್ಕಲಿಗರು ಆಕೆಯ ಮೇಲೆ ಹಲ್ಲೆ ನಡೆಸಿದ್ದರು. ಇದರ ವಿರುದ್ಧ ದಲಿತ ಸಂಘರ್ಷ ಸಮಿತಿಯು ಹೋರಾಡಿ ಆಕೆಗೆ ನ್ಯಾಯ ದೊರಕಿಸಿತ್ತು. ಶ್ರೀರಂಗಪಟ್ಟಣದ ನಗುವಿನಹಳ್ಳಿಯಲ್ಲಿ ಕೆಲವು ಮುಸ್ಲಿಂ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಅಲ್ಲಿನ ಸವರ್ಣೀಯರಿಂದ ಹಲ್ಲೆಯಾಗಿತ್ತು. ಇದನ್ನು ಕೂಡ ದಲಿತ ಸಂಘರ್ಷ ಸಮಿತಿ ತಡೆದಿತ್ತು.[23]

ಮದ್ದೂರಿನ ರಾಮರಹೀಮ ನಗರದಲ್ಲಿ ವಾಸವಾಗಿದ್ದ ಮುಸಲ್ಮಾನರ ಮನೆಗಳಿಗೆ ಆಕಸ್ಮಿಕ ಬೆಂಕಿ ಬಿದ್ದಿತ್ತು. ಆಗ ದ.ಸಂ.ಸ. ಸಂತ್ರಸ್ತರಿಗೆ ನ್ಯಾಯ ಸಿಗಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿತ್ತು. ತಕ್ಷಣವೇ ಸರ್ಕಾರದ ವತಿಯಿಂದ ಪುನರ್ವಸತಿ ಸೌಲಭ್ಯವನ್ನು ಒದಗಿಸಿತು. ಆದರೆ ಇಲ್ಲಿನ ಆಡಳಿತ ಮಂಡಳಿಯ ಭ್ರಷ್ಟರು ಮನೆಗಳ ಹಂಚಿಕೆಯಲ್ಲಿ ಕೆಲವು ಮುಸ್ಲಿಮೇತರರಿಗೆ ನೀಡಿದ್ದರು. ಇದರಲ್ಲಿ ಮದ್ದೂರಿನ ಕೆಲವು ರಾಜಕಾರಣಿಗಳ ಕುತಂತ್ರವಿತ್ತೆಂದು ಗೊತ್ತಾಗಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕರಾಗಿದ್ದ ವೆಂಕಟಗಿರಿಯಯ್ಯರವರು ತಮ್ಮ ಮುಂದಾಳತ್ವದಲ್ಲಿ ಕಾರ್ಯಕರ್ತರ ನೆರವಿನಿಂದ ಇದರ ವಿರುದ್ಧ ಹೋರಾಡಿದ್ದರು. ಈ ಸಂದರ್ಭದಲ್ಲಿ ವೆಂಕಟಗಿರಿಯಯ್ಯರವರ ಮೇಲೆ ಕೊಲೆ ಯತ್ನವಾಗಿ ಇವರನ್ನು ಪೊಲೀಸ್ ಮತ್ತು ರೈತಸಂಘದ ಕೆಲವರು ರಕ್ಷಿಸಿದ್ದರು.[24] ಹಾಗೆಯೇ ಮಂಗಳೂರು ಭಾಗದಲ್ಲೂ ಕೂಡ ದಲಿತೇತರರ ಮೇಲಾಗಿದ್ದ ದೌರ್ಜನ್ಯಗಳ ವಿರುದ್ಧ ದಲಿತ ಸಂಘರ್ಷ ಸಮಿತಿಯು ಪ್ರತಿಭಟಿಸಿ ನ್ಯಾಯಕ್ಕೆ ಒತ್ತಾಯಿಸಿತ್ತು.

**ಮಂಗಳೂರು ಜಿಲ್ಲೆಯ ಕೊರಗರ ಪರವಾದ ಭೂ ಹೋರಾಟ**

ಮಂಗಳೂರಿನ ಉರ್ವಸ್ಟೋರ್ಸ್ ಚಿಲಿಂಬಿಗುಡ್ಡೆಯಲ್ಲಿ ಕೊರಗ ಬುಡಕಟ್ಟು ಸಮುದಾಯವು 30 ವರ್ಷಗಳಿಂದಲೂ ವಾಸವಾಗಿತ್ತು. ನಗರದ ಮುನ್ಸಿಪಾಲ್ಟಿಯು 1984ರಲ್ಲಿ ವಾಸವಿದ್ದ ಸ್ಥಳದಲ್ಲಿ ನೀರಿನ ಟ್ಯಾಂಕ್ ನಿರ್ಮಿಸುವ ಸಲುವಾಗಿ ಇವರ ಗುಡಿಸಲುಗಳನ್ನು ನಾಶಗೊಳಿಸಿತು. ಇಂತಹ ಕಠಿಣ ಸಂದರ್ಭದಲ್ಲಿ ಮಂಗಳೂರು ಜಿಲ್ಲೆಯ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿ. ಸೋಮಶೇಖರ್‌ರವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಯನ್ನು ಆಯೋಜಿಸಿ ಅಲ್ಲಿನ ತಹಸೀಲ್ದಾರ್‌ರವರಿಗೆ ಈ ಕುಟುಂಬಗಳಿಗೆ ಆರ್ಥಿಕ ನೆರವು ಮತ್ತು ನಿವೇಶನಗಳನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿದ್ದರು. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಹೋರಾಟದ ಫಲವಾಗಿ ಕೊರಗರಿಗೆ ಸರ್ಕಾರವು 5 ರಿಂದ7 ಸೆಂಟ್ಸ್ ಭೂಮಿಯನ್ನು ನಿರ್ಮಾಣದ ಹಂತದಲ್ಲಿದ್ದ ನೀರನ ಟ್ಯಾಂಕ್ ಬಳಿ ನೀಡಲಾಗಿತ್ತು.[25] ಇದೇ ರೀತಿಯಲ್ಲಿ ರಾಯಚೂರಿನಲ್ಲಿ ಒಂದು ಪ್ರಕರಣ ನಡೆದಿತ್ತು. ಅದೇ ಪ್ರಖ್ಯಾತ ಕುದುರೆಮೋತಿ ಪ್ರಕರಣ.

**ರಾಯಚೂರು ಜಿಲ್ಲೆಯಲ್ಲಿ ಕುದುರೆಮೋತಿ ಪ್ರಕರಣದ ವಿರುದ್ಧದ ಹೋರಾಟ**

ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನಲ್ಲಿ ಕುದುರೆಮೋತಿ ಗ್ರಾಮವಿದೆ. ಇಲ್ಲಿ ವಾಸವಾಗಿದ್ದ ಮಹಾಂತಸ್ವಾಮಿ ಎಂಬ ಸ್ವಾಮೀಜಿ ಸುಮಾರು 68 ಮಠಗಳಿಗೆ ಮುಖ್ಯಸ್ಥನಾಗಿದ್ದನು. ಈತ ತನ್ನ ಮಠಕ್ಕೆ ಬರುತ್ತಿದ್ದ ಪಾರ್ವತಿ ಎಂಬಾಕೆಯನ್ನು ಬಲತ್ಕಾರ ಮಾಡಲು ಪ್ರಯತ್ನಿಸಿದ್ದನು. ಇದರಿಂದ ಆಕ್ರೋಶಗೊಂಡ ಈಕೆ ತನ್ನೊಂದಿಗೆ ಬಂದಿದ್ದ ಮುಸ್ಲಿಂ ಸಮುದಾಯದ ಹುಸೇನಾಬಿ ಜೊತೆ ಸೇರಿ ಸ್ವಾಮೀಜಿಗೆ ಚಪ್ಪಲಿ ತೋರಿಸಿ ಪ್ರತಿಭಟಿಸಿದ್ದರು. ಇದನ್ನು ಸಹಿಸದ ಸ್ವಾಮೀಜಿಯ

ಅಣ್ಣನ ಮಗನಾದ ಸಿದ್ದಯ್ಯನು ಹುಸೇನಾಬಿಗೆ ಲೈಂಗಿಕ ಕಿರುಕುಳವನ್ನು ನೀಡಲು ಪ್ರಯತ್ನಿಸಿ ಹೆದರಿ ಓಡಿಹೋಗಿದ್ದನು.

ಆನಂತರ ಅಂದರೆ 11 ಜೂನ್, 1985ರಂದು ಬೆಳಿಗ್ಗೆ ಹುಸೇನಾಬಿ ಮನೆಯ ಮೇಲೆ ಪಾನಮತ್ತರಾಗಿದ್ದ ಸ್ವಾಮೀಜಿ ಮತ್ತು ಸಿದ್ದಯ್ಯ ಬೆಂಬಲಿತ ಗುಂಪೊಂದು ಆಕ್ರಮಣ ಮಾಡಿ ಈಕೆಯನ್ನು ಬೀದಿಗೆಳೆದು ಮೈಮೇಲಿನ ಬಟ್ಟೆಯನ್ನು ಹರಿದು ಅವಮಾನವಾಗುವಂತೆ ಮಾಡಿದ್ದರು. ಅಲ್ಲದೆ ಈಕೆಯನ್ನು ಅಂಗಾತ ಮಲಗಿಸಿ ಬೀಡಿ, ಸಿಗರೇಟುಗಳಿಂದ ಅವಳ ದೇಹವನ್ನು ಮನಬಂದಂತೆ ಸುಟ್ಟು ಹಿಂಸಿಸಿದ್ದರು. ನಂತರ ಈಕೆಯ ಜೊತೆಗಾತಿ ಪಾರ್ವತಿಯನ್ನು ಬಸ್ ನಿಲ್ದಾಣವೊಂದರಲ್ಲಿ ಪತ್ತೆಹಚ್ಚಿ ಸೀರೆ, ಕುಪ್ಪಸಗಳನ್ನು ಹರಿದು ವಿವಸ್ತ್ರಗೊಳಿಸಿ ಬೇವಿನಸೊಪ್ಪು ಮತ್ತು ಚಪ್ಪಲಿ ಹಾರ ಹಾಕಿ ಬೀದಿಯಲ್ಲಿ ಮೆರವಣಿಗೆ ಮಾಡಿದ್ದರು. ಇದನ್ನು ತಿಳಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮುಂದಾಳುಗಳು ಹಾಗೂ ಇನ್ನಿತರ ಪ್ರಗತಿಪರ ಸಂಘಟನೆಗಳ ನಾಯಕರುಗಳು ಉಗ್ರವಾಗಿ ಪ್ರತಿಭಟಿಸಿದ್ದರು. ಇದರಿಂದಾಗಿ ಸರ್ಕಾರ ಹುಸೇನಾಬಿಗೆ ಒಂದು ನಿವೇಶನಾ ಮತ್ತು 2000 ರೂಪಾಯಿಗಳನ್ನು ಕೊಟ್ಟು ಕಣ್ಣೊರೆಸುವ ತಂತ್ರ ಮಾಡಿತ್ತೇ ಹೊರತು ಈ ಪ್ರಕರಣಕ್ಕೆ ಕಾರಣವಾಗಿದ್ದ ಸ್ವಾಮೀಜಿ ಹಾಗೂ ಸಿದ್ದಯ್ಯರವರನ್ನು ಬಂಧಿಸಿರಲಿಲ್ಲ. ಇದರ ಹಿನ್ನಲೆಯಲ್ಲಿ ಅರವಿಂದ ಮಾಲಗತ್ತಿಯವರನ್ನು ಒಳಗೊಂಡ ಗೀತಾ ಸುರತ್ಕಲ್, ಸಾರಾ ಅಬೂಬಕರ್, ಶೇಖರ ಇಡ್ಯ, ಶ್ರೀನಿವಾಸ್ ಕಾರ್ಕಳ, ಫಕೀರ್ ಅಹಮದ್ ಕಟಪಾಡಿ ಮುಂತಾದ ಸ್ಥಳೀಯ ಪ್ರಗತಿಪರ ಚಿಂತಕರು 'ಕುದುರೆಮೋತಿ ಹೋರಾಟ ಸಮಿತಿ'ಯನ್ನು ರಚಿಸಿಕೊಂಡು ಈ ಆರೋಪಿಗಳ ವಿರುದ್ಧ ಬೃಹತ್ ಹೋರಾಟವನ್ನು ಮಾಡಿ ಜನರಲ್ಲಿ ಜಾಗೃತಿ ಮೂಡಿಸಿದ್ದರು.[26]

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣ ಸಮುದಾಯದ ಸೌಮ್ಯ ಕೊಲೆ ಪ್ರಕರಣ ವಿರುದ್ಧದ ಹೋರಾಟ**

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬ್ರಾಹ್ಮಣ ಹುಡುಗಿ ಸೌಮ್ಯ ಎಂಬಾಕೆಯ ಕೊಲೆಯಾಗಿತ್ತು. ಈಕೆ ಮತ್ತು ಮಸ್ಲಿಂ ಸಮುದಾಯದ ಆಶ್ರಫ್ ಎಂಬ ಯುವಕನ ನಡುವೆ ಪ್ರೇಮಾಂಕುರವಾಗಿದ್ದೇ ಈ ಕೊಲೆಗೆ ಕಾರಣವಾಗಿತ್ತು. ಕೊಲೆಯನ್ನು ಸೌಮ್ಯಾಳ ಪೋಷಕರೇ ತಮ್ಮ ಕುಲಗೌರವಕ್ಕಾಗಿ ಮಾಡಿದ್ದರು. ಆದರೆ ಕೊಲೆಯ ಆಪಾದನೆಯನ್ನು ಆಶ್ರಫ್ ಮೇಲೆ ಹಾಕಲಾಗಿತ್ತು. ರೊಚ್ಚಿಗೆದ್ದ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಈ ಪ್ರಕರಣದ ಹಿನ್ನಲೆಯಲ್ಲಿ ಪುತ್ತೂರಿನಲ್ಲಿದ್ದ ಮುಸ್ಲೀಂ ಸಮುದಾಯದವರ ಅಂಗಡಿ–ಮುಂಗಟ್ಟುಗಳನ್ನು ನಾಶಗೊಳಿಸಿ ಕೆಲವು ಮುಸಲ್ಮಾನರ ಮೇಲೆ ಹಲ್ಲೆ ಮಾಡಿ ಕೋಮುಸಂಘರ್ಷಕ್ಕೆ ಕಾರಣರಾಗಿದ್ದರು. ಹೀಗಾಗಿ ಈತನನ್ನು ಕೊಲೆ ಆರೋಪದ ಮೇಲೆ ಬಂಧಿಸಲಾಗಿತ್ತು. ಇದನ್ನು ಸಹಿಸದ ಜಿಲ್ಲೆಯ 'ದಲಿತ ಸಂಘಸಂಸ್ಥೆಗಳ ಒಕ್ಕೂಟ' ಹಾಗೂ 'ಬೆಂಗಳೂರು ದಲಿತ ಹ್ಯೂಮನ್ ರೈಟ್ಸ್ ಫೋರಮ್ ಸಂಘಟನೆಗಳು' ಈ ಪ್ರಕರಣವನ್ನು ಕೂಲಂಕಶವಾಗಿ ಪರಿಶೀಲಿಸಿ ಸತ್ಯಾಸತ್ಯತೆಯನ್ನು ಬೇಧಿಸಿ ಹೋರಾಟ ಮಾಡಿ

ಆಶ್ರಫ್‌ನ ನೆರವಿಗೆ ಬಂದಿತ್ತು. ಇದೇ ಸಂದರ್ಭದಲ್ಲಿ ಈ ಸಂಘಟನೆಗಳು 'ಪುತ್ತೂರು ಗಲಭೆ–ಯಾರ ಸ್ವಾರ್ಥಕ್ಕೆ ಯಾರ ಬಲಿ' ಎಂಬ ಕಿರುಹೊತ್ತಿಗೆಯನ್ನು ಹೊರತಂದು ಸತ್ಯಸಂಗತಿಯನ್ನು ಬಯಲು ಮಾಡಿತ್ತು. ಹೀಗಾಗಿ ನ್ಯಾಯಾಲಯ ಆಶ್ರಫ್‌ನನ್ನು ನಿರಪರಾಧಿ ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಿತ್ತು.[27] ಹೀಗೆ ರಾಜ್ಯದ ಯಾವುದೇ ಭಾಗಗಳಲ್ಲಿ ದಲಿತೇತರರ ಮೇಲೆ ಯಾವುದೇ ರೀತಿಯ ಶೋಷಣೆಗಳಾದರೂ ಅವುಗಳ ವಿರುದ್ಧ ಜಾತ್ಯತೀತ ಮನೋಭಾವ ಮತ್ತು ಕಾಳಜಿಯಿಂದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಾರಥಿಗಳು ಟೊಂಕಕಟ್ಟಿ ನಿಲ್ಲುತ್ತಿದ್ದರು.

**ಉಪಸಂಹಾರ**

ಹೀಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಹಾಗೂ ಇನ್ನಿತರ ಪ್ರಗತಿಪರ ಸಂಘಟನೆಗಳು ಶೋಷಣೆಗೆ ತುತ್ತಾದ ದಲಿತೇತರರ ಪರವಾಗಿ ಜಾತ್ಯತೀತ ಭಾವನೆಯಿಂದ ನೊಂದ ಮನಗಳಿಗೆ ದಿವ್ಯೌಷಧವಾಗಿ ಕಾರ್ಯನಿರ್ವಹಿಸಿ ಸೈ ಎನಿಸಿಕೊಂಡಿದ್ದವು. ಅಲ್ಲದೆ ಇಡೀ ರಾಜ್ಯದಾದ್ಯಂತ ಶೋಷಣಾರಹಿತ ಸಮಸಮಾಜವನ್ನು ನಿರ್ಮಿಸಲು ಕಂಕಣತೊಟ್ಟು ಕಾರ್ಯಪ್ರವೃತ್ತರಾಗಿದ್ದರು. ಆದರೆ ಕಾಲಕ್ರಮೇಣ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ವಿಘಟನೆ ಎಂಬ ಚಂಡಮಾರುತಕ್ಕೆ ಸಿಕ್ಕಿ ಧೂಳೀಪಟವಾದ್ದರಿಂದ ಇದರ ಏಕೀಕೃತ ಸಂಘಟನೆಯ ಹೋರಾಟದ ತೀವ್ರತೆ ಕ್ಷೀಣಿಸಿತು.

**ಕೊನೆಟಿಪ್ಪಣಿಗಳು:**


1. ಗಣೇಶನ್ ಎಸ್. (1992). ದಲಿತ ಸಾಹಿತ್ಯ ಚಳುವಳಿ. ಪಂಚಮ ಪ್ರಕಾಶನ, ಪುಟ10.
2. Gail omvedt. (1995). Dalit Visions, Orient Longman Ptd, New Delhi., page72.
3. ಲಕ್ಷ್ಮಣ ತೆಲಗಾವಿ. (1999). ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು, ಏಕೀಕರಣೋತ್ತರ ಕರ್ನಾಟಕ, ಸಂಪುಟ–05, ಪ್ರಕಾಶಕರ ಹೆಸರು ಮತ್ತು ಸ್ಥಳ. ಪುಟ 2, 23, 27.
4. ಗೋವಿಂದಯ್ಯ, .(ಸಂ). (1980). ಪಂಚಮ. ಮಾಸಿಕ, ಸಂ4, (8–9), ಪುಟ 4–6.
5. ಕ.ದ.ಸಂ.ಸ., ಹೋರಾಟದ ಹಾಡುಗಳು., ಪುಟ 01.
6. ಗೋವಿಂದಯ್ಯ.. (ಸಂ). (1980). ಪಂಚಮ. ಮಾಸಿಕ ಸಂ4, (10), ಪುಟ 1, 4–8.
7. ಲಂಕೇಶ್ ಪಿ. (ಜನವರಿ 10, 1988, )ಲಂಕೇಶ್ ಪತ್ರಿಕೆ, ಬೆಂಗಳೂರು. ಪುಟ 5.
8. ಕೇಶವಮೂರ್ತಿ ಹೆಚ್.ಎಲ್ (ಪ್ರಗತಿಪರ ಚಿಂತಕರು ಮತ್ತು ಹೋರಾಟಗಾರರು) ರವರ ಸಂದರ್ಶನ.
9. ನಾರಾಯಣ್‌ರವರ (ನಿವೃತ್ತ ಡಿ.ಸಿ.ಸಿ. ಬ್ಯಾಂಕ್ ನೌಕರರು, ಮಂಡ್ಯ) ಸಂದರ್ಶನ.
10. ಮೀನಾಕ್ಷಮ್ಮರವರ (ಎ. ನಾಗತೀಹಳ್ಳಿ) ಸಂದರ್ಶನ.

11. ನಾಗರಾಜಯ್ಯ ಎಂ.ಎ. ರವರ (ದಲಿತ ಸಂಘರ್ಷ ಸಮಿತಿ. ಮುಂದಾಳು, ನಾಗಮಂಗಲ ತಾಲ್ಲೂಕು) ಸಂದರ್ಶನ.
12. ಹುರುಗಲವಾಡಿ ರಾಮಯ್ಯರವರ (ದಲಿತ ಕಲಾಮಂಡಳಿಯ ಕಲಾವಿದರು, ಮದ್ದೂರು) ಸಂದರ್ಶನ.
13. ಕೃಷ್ಣ ಎಸ್.ಎಂ. ರವರ (ದಲಿತ ಸಂಘರ್ಷ ಸಮಿತಿ. ಮುಂದಾಳು, ಮಳವಳ್ಳಿ ತಾಲ್ಲೂಕು, ಶೆಟ್ಟಿಹಳ್ಳಿ) ಸಂದರ್ಶನ.
14. ಪೊಲೀಸಿನವರ ಪಕ್ಷಪಾತ ನೀತಿಯ ವಿರುದ್ಧ ಉಪವಾಸ ಸತ್ಯಾಗ್ರಹ, (ಅಕ್ಟೋಬರ್ 9, 1992). ದ.ಸಂ.ಸ. ಕರಪತ್ರ. ದಲಿತ ಸಂಘರ್ಷ ಸಮಿತಿ . ತಾಲ್ಲೂಕು ಶಾಖೆ, ನಾಗಮಂಗಲ.
15. ಪೂರ್ವೋಕ್ತ., 8
16. ಪೂರ್ವೋಕ್ತ., 14
17. ಗುರುಪ್ರಸಾದ್ ಕೆರಗೋಡುರವರ (ರಾಜ್ಯ ಸಂಚಾಲಕರು, ಕರ್ನಾಟಕ ದಲಿತ ಸಂಘರ್ಷ ಸಮಿತಿ) ಸಂದರ್ಶನ.
18. ಪೂರ್ವೋಕ್ತ., 8
19. ನಾಗರಾಜಯ್ಯ ಎಂ. ರವರ ನಾಗಮಂಗಲ ತಾಲ್ಲೂಕಿನ ದಲಿತ ಹೋರಾಟಗಳ ವರದಿಯ ಕಿರು ಹೊತ್ತಿಗೆ, 5.1.1986 ರಿಂದ 1.8.1997ರವರೆಗೆ.
20. ಪೂರ್ವೋಕ್ತ., 17
21. ಚಲುವಯ್ಯ ಹಾಗೂ ರಾಜಶೇಖರ್ (ಕೆ.ಆರ್. ಪೇಟೆ ತಾಲ್ಲೂಕಿನ ದಲಿತ ಸಂಘರ್ಷ ಸಮಿತಿಯ ಚಳವಳಿಗಾರರು) ರವರುಗಳ ಸಂದರ್ಶನ.
22. ನಾಗರಾಜಯ್ಯ ಎಂ. ರವರ (ದಲಿತ ಸಂಘರ್ಷ ಸಮಿತಿಯ ಮುಂದಾಳು, ನಾಗಮಂಗಲ ತಾಲ್ಲೂಕು) ಸಂದರ್ಶನ.
23. ಚಂದ್ರಶೇಖರ್ (ಟಿಪ್ಪು) ರವರ (ದಲಿತ ಸಂಘರ್ಷ ಸಮಿತಿಯ ಚಳವಳಿಗಾರರು, ಬಾಬೂರಾಯನಕೊಪ್ಪಲು, ಶ್ರೀರಂಗಪಟ್ಟಣ) ಸಂದರ್ಶನ.
24. ಅಂದಾನಿಯವರ (ದಲಿತ ಸಂಘರ್ಷ ಸಮಿತಿಯ ಚಳವಳಿಗಾರರು, ಮದ್ದೂರು ತಾಲ್ಲೂಕು) ಸಂದರ್ಶನ.
25. ಅರವಿಂದ ಮಾಲಗತ್ತಿ. (ಸಂ). (2014). ದಲಿತ ಸಂಘಟನೆಯ ಹೋರಾಟದ ಹೆಜ್ಜೆಗಳು, ಭಾಗ–3, ಹೋರಾಟಗಳ ಜಿಲ್ಲಾವಾರು ಸಮೀಕ್ಷೆ, ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ2, ದಲಿತ ಚಳವಳಿ. ಪುಟ486.
26. ಮೇಲಿನದೇ., ಪುಟ491.
27. ಮೇಲಿನದೇ., ಪುಟ483.